20	ಲೋಕೋಪಯೋಗಿ	ರಾಜಸ್ವ	10105.43	–	10105.43
		ಬಂಡವಾಳ	18165.95	–	18165.95
21	ಜಲಸಂಪನ್ಮೂಲ	ರಾಜಸ್ವ	142.70	–	142.70
		ಬಂಡವಾಳ	5345.50	–	5345.50
22	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು	ರಾಜಸ್ವ	1022.12	–	1022.12
27	ಕಾನೂನು	ರಾಜಸ್ವ	50.00	–	50.00
	ಒಟ್ಟು	ರಾಜಸ್ವ	**62063.12**	**3.00**	**62066.12**
		ಬಂಡವಾಳ	**31806.95**		**31806.95**
	ಒಟ್ಟು ಜುಮ್ಲಾ		**93870.07**	**3.00**	**93873.07**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2004–2005ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 205 ನೇ (1)(ಎ) ಅನುಚ್ಛೇದದ ಉಪಬಂದಗಳಿಗನುಸಾರ ಈ ವಿಧೇಯಕವನ್ನು ಮಂಡಿಸಲಾಗಿದೆ.

ಸಿದ್ದರಾಮಯ್ಯ
ಉಪಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಟಿ. ರಾಜಣ್ಣ
ಕಾರ್ಯದರ್ಶಿ

1420(1714) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ): ಶ್ರೀ ವಿಶ್ವನಾಥ್ ಕೆ.ಮಾಮನಿ(ಪರಸಗಡ) ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ವಾಣಿಜ್ಯ ಬೆಳೆಯಾದ ಮೆಣಸಿನಕಾಯಿ ಬೆಳೆಯ ಪ್ರಮಾಣ ಎಷ್ಟು;

ಆ) ಹೆಚ್ಚು ಮೆಣಸಿನಕಾಯಿ ಬೆಳೆಯುವ ಜಿಲ್ಲೆಯಾದ ಧಾರವಾಡ–ಹಾವೇರಿಗಳಲ್ಲಿ ಮೆಣಸಿನ ಕಾಯಿ ಸಂಸ್ಕರಣಾ ಕೇಂದ್ರ ಮಾಡಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ?

ಇ) ಸದರಿ ಬೆಳೆಗೆ ಬೆಂಬಲ ಬೆಲೆ ಕೊಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ಶ್ರೀನಿವಾಸ್ (ತೋಟಗಾರಿಕೆ ಸಚಿವರು):

ಅ) ಉತ್ತರ ಕರ್ನಾಟಕದಲಿ ಅಂದಾಜು 2.21 ಲಕ್ಷ ಟನ್ ಹಸಿ ಮೆಣಸಿನಕಾಯಿ ಹಾಗೂ 1.55 ಲಕ್ಷ ಟನ್ ಒಣ ಮೆಣಸಿನಕಾಯಿಯನ್ನು ಉತ್ಪಾದಿಸಲಾಗುತ್ತಿದೆ.

ಆ) ಇರುವುದಿಲ್ಲ.

ಇ) ಇಂತಹ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.